**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

ಸಂಖ್ಯೆ: ಡಿಟಿಇ 01 ಡಿಇಕ್ಯೂ(2) 97 ಭಾಗ-2 | 3939 ದಿನಾಂಕ: 20/02/2015

**ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಕಛೇರಿಯ ನಡವಳಿಗಳು**

**ವಿಷಯ:** ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು ಇವರ ಅನಧಿಕೃತ ಗೈರು ಹಾಜರಿ ಕುರಿತು ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಪ್ರಿನ್ಸಿಪಾಲರು ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು, ಇವರಿಗೆ ಜಾರಿ ಮಾಡಲಾದ ಜ್ಞಾಪನ ಪತ್ರ ದಿನಾಂಕ: 09/06/2012, 19/09/2013,
2. ಪ್ರಿನ್ಸಿಪಾಲರಿಗೆ ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು ಇವರು ಸಲ್ಲಿಸಿರುವ ಮನವಿ ಪತ್ರ ದಿನಾಂಕ: 12/12/2005.
3. ಪ್ರಿನ್ಸಿಪಾಲರು ನಿರ್ದೇಶಕರಿಗೆ ಬರೆದ ಪತ್ರ ದಿನಾಂಕ: 22/08/2006, 19/10/2006, 10/08/2009, 28/04/2010, 06/12/2012, 17/04/2013, 11/11/2013, 12/06/2014 ಮತ್ತು 04/02/2015.
4. ನಿರ್ದೇಶಕರಿಂದ ಕಾರಣ ಕೇಳುವ ನೋಟೀಸ್ ದಿನಾಂಕ: 11/01/2013, 30/08/2013.
5. ದೋಷಾರೋಪಣ ಪಟ್ಟಿ ದಿನಾಂಕ: 27/11/2013.
6. ವಿಚಾರಣಾಧಿಕಾರಿಗಳ ನೇಮಕಾತಿ ದಿನಾಂಕ: 19/12/2013.
7. ವಿಚಾರಣಾಧಿಕಾರಿಗಳು ಅಂತಿಮ ವರದಿ ಸಲ್ಲಿಸಿದ ದಿನಾಂಕ: 14/05/2014.
8. ಎರಡನೇ ಕಾರಣ ಕೇಳುವ ನೋಟೀಸು ದಿನಾಂಕ: 15/05/2014.
9. ಉಚ್ಚನ್ಯಾಯಾಲಯ ಆದೇಶ ಪ್ರತಿ ದಿನಾಂಕ: 04/01/2000.
10. ಪೂರ್ವಭಾವಿ ಇಲಾಖಾ ವಿಚಾರಣಾ ವರದಿ ದಿನಾಂಕ: 28/05/2005.
11. ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು ಇವರ ಮುಚ್ಚಳಿಕೆ ಪ್ರಮಾಣ ಪತ್ರ ದಿನಾಂಕ: 08/05/2013.
12. ಒಂದು ವಾರ್ಷಿಕ ವೇತನ ಬಡ್ತಿಯನ್ನು ದಂಡನೆ ರೂಪದಲ್ಲಿ ಅಸಂಚಿತವಾಗಿ ತಡೆಹಿಡಿದ ಆದೇಶ ದಿನಾಂಕ: 12/02/2006

**********

**ಪ್ರಸ್ತಾವನೆ;**

ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ **ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು,** ಇವರು ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ದಿನಾಂಕ: 18/01/2013 ರಿಂದ 25/05/2013ರವರೆಗೆ ಹಾಗೂ ಈ ಮಧ್ಯೆ ಆಗಿಂದಾಗ್ಗೆ ಅನಧಿಕೃತ ಗೈರುಹಾಜರಾಗಿದ್ದು, ದಿನಾಂಕ: 28/06/2014 ರಿಂದ 15/10/2014ರವರೆಗೆ ಮತ್ತು 20/10/2014 ರಿಂದ ಇಲ್ಲಿಯವರೆಗೂ ದೀರ್ಘಾವಧಿ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಹಿಂದಿನಿಂದಲೂ ಇವರು ದೈನಂದಿನ ಕಛೇರಿ ಕೆಲಸಗಳಿಗೆ ಆಗಾಗ ಗೈರುಹಾಜರಾಗುವುದನ್ನು ರೂಢಿಸಿಕೊಂಡಿರುತ್ತಾರೆ. ಇವರ ಅನಧಿಕೃತ ಗೈರುಹಾಜರಿ ಹಾಗೂ ಕರ್ತವ್ಯ ನಿರ್ಲಕ್ಷ್ಯತೆ ಬಗ್ಗೆ ಸಂಸ್ಥೆಯ ಪ್ರಿನ್ಸಿಪಾಲರು ಬರೆದ ಪತ್ರದ ಅನುಸಾರ ಸದರಿಯವರಿಗೆ ಇಲಾಖಾ ವತಿಯಿಂದ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿ, ಸದರಿ ನೋಟೀಸಿಗೆ ಸಮಜಾಯಿಷಿಯನ್ನು ದಿನಾಂಕ: 18/03/2013 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಿದ ಶಿಸ್ತು ಪ್ರಾಧಿಕಾರವು ದಿನಾಂಕ:03/07/2010ರಂದು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/04/ಸೆಇವಿ/89, ದಿನಾಂಕ:31/01/1989ರಂತೆ ಒಂದು ಅವಕಾಶವನ್ನು ನೀಡಿ ಕಾರ್ಯವರದಿ ಮಾಡಿಕೊಳ್ಳಲು ತಿಳಿಸಲಾಗಿತ್ತು. ತದನಂತರವು ಸದರಿಯವರು ಕರ್ತವ್ಯಕ್ಕೆ ಗೈರುಹಾಜರಾಗುವುದನ್ನು ರೂಢಿಸಿಕೊಂಡು ಪದೇ ಪದೇ ಕರ್ತವ್ಯ ನಿಲಕ್ಷ್ಯ ತೋರುವ ಮೂಲಕ ಗೈರು ಹಾಜರಾಗುತ್ತಿರುವುದನ್ನು ಗಮನಿಸಿ ಮತ್ತೊಂದು ಅವಕಾಶವನ್ನು ನೀಡುತ್ತಾ ದಿನಾಂಕ: 08/05/2013ರಂದು ಮುಚ್ಚಳಿಕೆ ಪ್ರಮಾಣ ಪತ್ರದಂತೆ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಲಾಯಿತು. ಆದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆ ಕಂಡು ಬರದೇ ಇದ್ದುದ್ದರಿಂದ ಪೂರ್ವಭಾವಿ ಇಲಾಖಾ ವಿಚಾರಣಾ ವರದಿಯನ್ನು ಮತ್ತು ಪ್ರಿನ್ಸಿಪಾಲರ ಪತ್ರಗಳನ್ನು ಪರಿಗಣಿಸಿ ಸದರಿಯವರ ಅನಧಿಕೃತ ಗೈರುಹಾಜರಿಯ ಸತ್ಯಾಸತ್ಯತೆಯ ವಿಚಾರಣೆ ನಡೆಸಲು ತೀರ್ಮಾನಿಸಿ ದಿನಾಂಕ: 27/11/2013ರಲ್ಲಿ ಸದರಿಯವರ ವಿರುದ್ಧ ದೋಷಾರೋಪಣ ಪಟ್ಟಿ

ಜಾರಿಗೊಳಿಸಿ ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿತ್ತು. ಸದರಿ ದೋಷಾರೋಪಣ ಪಟ್ಟಿಗೆ ಯಾವುದೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸದೇ ಕರ್ತವ್ಯ ನಿರ್ಲಕ್ಷ್ಯತೆ ತೋರಿ ಕರ್ನಾಟಕ ನಾಗರೀಕ ಸೇವಾ ನಡತೆ (ವರ್ತನೆ) ನಿಯಮಗಳು 1966ರ ಸಾಮಾನ್ಯ ನಿಯಮ 1) (i), (ii) ಮತ್ತು (iii)ನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಅನಧಿಕೃತ ಗೈರು ಹಾಜರಿ ಹಾಗೂ ಅವರ ಮೇಲಿನ ಆರೋಪಗಳಿಗೆ ಪೂರ್ಣಾವಧಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ದಿನಾಂಕ: 19/11/2013ರ ಈ ಕಛೇರಿಯ ಆದೇಶದಲ್ಲಿ ಶ್ರೀ.ಎಸ್.ಇಂಧೂದರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಯಿತು. ಅದರಂತೆ ವಿಚಾರಣಾಧಿಕಾರಿಗಳು ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸಿ ದಿನಾಂಕ: 14/05/2014 ರಂದು ವಿಚಾರಣೆಯ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

ಈ ಕಛೇರಿಯ ಎರಡನೇ ಕಾರಣ ಕೇಳುವ ನೋಟಿಸ್ ಸಂ: ಡಿಟಿಇ 01 ಡಿಇಕ್ಯೂ(2) 1997 ಭಾಗ-2, ದಿನಾಂಕ:15/05/2014ರಲ್ಲಿ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಲಗತ್ತಿಸಿ, ಸದರಿಯವರ ವಿರುದ್ಧ ಹೊರಿಸಲಾದ ಆರೋಪವು ಸಾಬೀತಾಗಿದೆಯೆಂದು ಸಲ್ಲಿಸಿರುವ ವರದಿಯನ್ನು ಅಂಗೀಕರಿಸಿ ಏಕೆ ಸೂಕ್ತ ದಂಡನೆ ವಿಧಿಸಬಾರದು ಎಂಬುದರ ಬಗ್ಗೆ ನೋಟಿಸ್ ತಲುಪಿದ 30 ದಿವಸಗಳೊಳಗಾಗಿ ಲಿಖಿತ ಸಮಜಾಯಿಷಿ ಸಲ್ಲಿಸಲು ತಿಳಿಸಲಾಗಿತ್ತು.

ಆದರೆ, ಸದರಿ 2ನೇ ಕಾರಣ ಕೇಳುವ ನೋಟಿಸನ್ನು ಸ್ವೀಕರಿಸಿಕೊಂಡು ಯಾವುದೇ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಹಾಗೂ ಪುಷ್ಠೀಕರಿಸುವಂತಹ ಯಾವುದೇ ಕಾರಣಗಳನ್ನು ಅಥವಾ ದಾಖಲೆಗಳನ್ನಾಗಲೀ ಸಲ್ಲಿಸಿರುವುದಿಲ್ಲ ಹಾಗೂ ಸದರಿಯವರ ಸೇವಾವಧಿಯನ್ನು ಗಮನಿಸಲಾಗಿ ಈ ಹಿಂದೆಯೂ ಸಹ ಹಲವಾರು ಬಾರಿ ಗೈರು ಹಾಜರಾದ ಹಿನ್ನಲೆಯಲ್ಲಿ ಪ್ರಿನ್ಸಿಪಾಲರ ಹಂತದಲ್ಲಿ ಜ್ಞಾಪನಗಳನ್ನು ಜಾರಿಮಾಡಲಾಗಿದ್ದರೂ ಸಹ ಅವರ ವರ್ತನೆಯಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ. ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಆರೋಪಿತರ ವಿರುದ್ಧ ಮಾಡಿದ ಆರೋಪಗಳು ರುಜುವಾತಾಗಿದ್ದರಿಂದ ಈ ಪ್ರಕರಣದಲ್ಲಿ ಆರೋಪಿತರಿಂದ ದುರ್ನಡತೆ ಎಸಗಲ್ಪಟ್ಟಿರುವುದನ್ನು ಯಾವುದೇ ಸಂದೇಹಕ್ಕೆ ಆಸ್ಪದ ಇಲ್ಲದಂತೆ ಖಚಿತಪಡಿಸಿದೆ. ಈ ಅಂಶಗಳನ್ನು ಸಮರ್ಥವಾಗಿ ಅಲ್ಲಗಳೆಯುವಂತಹ ಯಾವುದೇ ಅಂಶಗಳನ್ನು ಸಹ ಆರೋಪಿತರು ನಿರೂಪಿಸಿರುವುದಿಲ್ಲ. ವಿಚಾರಣೆಯು ಸಮರ್ಪಕವಾಗಿ ನಡೆದು ಆರೋಪಿತರಿಗೆ ತಮ್ಮ ವಾದವನ್ನು ಮಂಡಿಸಲು ವಿಫುಲ ಅವಕಾಶವನ್ನು ನೀಡಲಾಗಿದೆ. ಮತ್ತು ಇವರು ಅನಧಿಕೃತ ಗೈರು ಹಾಜರಿಯ ಹವ್ಯಾಸವನ್ನೇ ಬೆಳಸಿಕೊಂಡಿರುವುದರಿಂದ ಆರೋಪಿತರು ಯಾವುದೇ ಸಮಜಾಯಿಷಿಯನ್ನು ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಅವರ ವಿರುದ್ಧದ ವಿಚಾರಣಾ ವರದಿಯನ್ನು ಅಂಗೀಕರಿಸಿ ವಿಚಾರಣಾಧಿಕಾರಿಗಳ ನಿರ್ಣಯವನ್ನು ಒಪ್ಪಿಕೊಂಡ ಶಿಸ್ತು ಪ್ರಾಧಿಕಾರವು ಈ ಮುಂದಿನಂತೆ ಆದೇಶಿಸುತ್ತದೆ.

**<u>ನಿರ್ದೇಶಕರ ಆದೇಶ ಸಂಖ್ಯೆ: ಡಿಟಿಇ 01 ಡಿಇಕ್ಯೂ(2) 1997 ಭಾಗ-2, ಬೆಂಗಳೂರು</u>**

**<u>ದಿನಾಂಕ: 20 ನೇ ಫೆಬ್ರವರಿ 2015</u>**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳಿಂದಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 8(vi) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ **<u>ಸರ್ಕಾರಿ ಸೇವೆಯಿಂದ ಈ ಮೂಲಕ ಕಡ್ಡಾಯ ನಿವೃತ್ತಿಗೊಳಿಸಿದೆ.</u>**

ಸದರಿಯವರ ಗೈರು ಹಾಜರಾದ ಅವಧಿಯನ್ನು ಕೆಲಸ ಮಾಡದ ದಿನಗಳೆಂದು (Dies non ) ಎಂದು ಪರಿಗಣಿಸಿ ಆದೇಶಿಸಲಾಗಿದೆ.

**ನಿರ್ದೇಶಕರು**
**ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ,**
**ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.**

20/2/15

ಇವರಿಗೆ,

1. ಶ್ರೀ. ದಯಾನಂದ.ಬಿ.ಎಂ. ನಂ.126, ಎಸ್‌ಎಲ್‌ಎನ್ ಟಾಕೀಸ್ ಪಕ್ಕ, ಹೆಸರುಘಟ್ಟ, ಬೆಂಗಳೂರು-85

2. ಶ್ರೀ. ದಯಾನಂದ.ಬಿ.ಎಂ. ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು-85. (ಪ್ರಿನ್ಸಿಪಾಲರ ಮುಖಾಂತರ) (ಸದರಿ ಆದೇಶವನ್ನು ನೋಂದಣಿ ಅಂಚೆ ಮತ್ತು ಸ್ವೀಕೃತಿ ಮುಖಾಂತರ ಜಾರಿ ಮಾಡಿ ವರದಿಯನ್ನು ಈ ಕಛೇರಿಗೆ ಕಳುಹಿಸುವ ಸಲುವಾಗಿ)
3. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ವಿಕಾಸ ಸೌಧ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವುದು.

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ**

1. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
4. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
5. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
6. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ಪ್ರಾಂಶುಪಾಲರು, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರುಘಟ್ಟ, ಬೆಂಗಳೂರು ಇವರು ಸದರಿಯವರನ್ನು ಕಡ್ಡಾಯ ನಿವೃತ್ತಿಗೊಳಿಸಿರುವ ಪ್ರಯುಕ್ತ ಕೂಡಲೇ ಇವರನ್ನು ಕಾರ್ಯವಿಮುಕ್ತಿಗೊಳಿಸಲು ಸೂಕ್ತ ಕ್ರಮ ಕೈಗೊಂಡು ವರದಿ ಕಳುಹಿಸುವುದು.
9. ನಿರ್ದೇಶನಾಲಯದ ಆಪ್ತ ಶಾಖೆಗೆ.
10. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
11. ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಸದರಿ ಆದೇಶವನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
12. ಇಎಸ್‌ಟಿ(6), ಇಎಸ್‌ಟಿ8(ಬಿ), ಇಎಸ್‌ಟಿ(9) ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.